| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 1405/2024**

ಪಿಡ್ಬ್ಲೂಃ 7 ಸಿಡ್ಲ್ಯೂಃ 10

ಸಾಕ್ಷಿದಾರನ ಹೆಸರು : ಉಮೇಶ್ ಪೂಜಾರಿ
ತಂದೆಯ ಹೆಸರು : ನಾರಯಣ ಪೂಜಾರಿ
ಪ್ರಾಯ : 46 ವರ್ಷ
ಉದ್ಯೋಗ : ಗಾರೆ ಕೆಲಸ
ವಾಸ : ಸೊಮೇಶ್ವರ

ದಿನಾಂಕ 19.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ24.06.2024 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದಿರುತ್ತಾರೆ. ನನ್ನ ಜೊತೆ ಚಾಸಾ-11 ರವರು ಇದ್ದರು. ನಮ್ಮ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ, ಆದರೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ. ಈಗ ನಾನುನೋಡಿದ ದಾಖಲೆಯಲ್ಲಿ ಸಹಿ ಇದೆ. ಸದ್ರಿ ದಾಖಲೆ ಆರೋಪಿ ದಸ್ತಗಿರಿ ಮಹಜರು ಆಗಿದ್ದು ಸಾಕ್ಷಿ ತನ್ನ ಸಹಿಯನ್ನು ಒಪ್ಪಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿನಾಂಕ 24.06.2024 ರಂದು ಹೆಬ್ರಿ ಪೊಲೀಸ್ ಠಾಣೆಯಲ್ಲಿ ಅರೋಪಿಯನ್ನು ವಶಕ್ಕೆ ಪಡೆದು ನನ್ನ ಹಾಗೂ ಚಾಸಾ-11 ರವರ ಸಮಕ್ಷಮ ದಸ್ತಗಿರಿ ಮಹಜರು ಮಾಡಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು :</u>** ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ ಏನು ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ